# ಟೆಕ್ಕಿಯ ರಂಗ ಮೋಹ



**ಶ್ರುತಿ ಶಿವಶಂಕರ್**

ಕಲರ್ಸ್ ಸೂಪರ್‌ನ 'ನಾಗಕನ್ನಿಕೆ'ಯ ನಾಗಕನ್ನಿಕೆ

★ *ಟೆಕ್ಕಿ ಆಗಿದ್ದವರು... ಬಣ್ಣದ ಗೀಳಿಗೆ ಬಿದ್ದಿದ್ದು ಹೇಗೆ?*

ಆಗಾಗ ಬೆಂಗಳೂರಿನ ರಂಗಶಂಕರದ ಎದುರು ಓಡಾಡುತ್ತಿರುತ್ತೇನೆ. ನಮ್ಮ ಮನೆಯೂ ಅದರ ಸಮೀಪದಲ್ಲಿಯೇ ಇದೆ. ನಾನೂ ಇಲ್ಲಿ ಒಮ್ಮೆಯಾದರೂ ನಾಟಕ ಮಾಡಬೇಕು ಎನ್ನುವ ಬಯಕೆ ನನ್ನಲ್ಲಿ ಮೂಡಿತು. ಬಾಲ್ಯದಿಂದಲೂ ಆ ಆಕರ್ಷಣೆ ಉಳಿದೇ ಇತ್ತು. ಆರಂಭದಲ್ಲಿ ಡಾ.ಮಾಲಾ ಶಶಿಕಾಂತ್ ಮತ್ತು ವಿದೂಷಿ ಪ್ರಿಯಾ ಆನಂದ್ ಅವರ ಬಳಿ ಭರತನಾಟ್ಯವನ್ನು ಅಭ್ಯಾಸ ಮಾಡುತ್ತಿದ್ದೆ. ಎಂಜಿನಿಯರಿಂಗ್ ಓದುವ ಸಂದರ್ಭಕ್ಕೆ ಸಮಯದ ಹೊಂದಾಣಿಕೆ ಆಗಲಿಲ್ಲ ಎಂದು ಸೀನಿಯರ್ ಮುಗಿಸಿದ ನಂತರ ಕಾಲಿಗೆ ಗೆಜ್ಜೆ ಕಟ್ಟಲಿಲ್ಲ. ಓದು ಮುಗಿದ ತಕ್ಷಣ ವಿಪ್ರೊದಲ್ಲಿ ಕೆಲಸ ಸೇರಿದೆ. ನಂತರ ಮತ್ತೊಂದು ಕಂಪೆನಿಗೆ ಸೇರಿದೆ. ಅಷ್ಟರಲ್ಲಿ ಮದುವೆ ಆಯಿತು. ಕೆಲಸದ ಆಸಕ್ತಿ ಕಡಿಮೆಯಾಗಿ ಕಲೆಯ ಮೋಹ ಮತ್ತೆ ಕಾಡತೊಡಗಿತು. ಪತಿ ಕುಶಾಲ್ ನೃತ್ಯವನ್ನು ಅಭ್ಯಾಸ ಮಾಡುವಂತೆ ಪ್ರೋತ್ಸಾಹಿಸಿದರು. ನೃತ್ಯ ಅಭ್ಯಾಸಕ್ಕೆ ಸೇರಿಕೊಂಡೆ. ಅದರ ಜೊತೆ 'ರಂಗ ಸೌರಭ' ತಂಡದಲ್ಲಿ ನನ್ನನ್ನು ತೊಡಗಿಸಿಕೊಂಡೆ. ಅದು ನನ್ನನ್ನು ಅಭಿನಯದಲ್ಲಿ ತೊಡಗುವಂತೆ ಮಾಡಿತು.

★ *ಕಿರುತೆರೆಗೆ ಪರಿಚಯ ಆಗಿದ್ದು ಹೇಗೆ?*

ಇದು ನನ್ನ ಮೊದಲ ಅವಕಾಶ. ಮುಂಚೆ 'ರಾಧಾ ನಿವಾಸ' 'ಮಾವಿನ ಗುಡಿ ಕಾಲೊನಿ' ಎಂಬ ನಾಟಕಗಳಲ್ಲಿ ಪ್ರಧಾನ ಪಾತ್ರಗಳನ್ನು ನಿರ್ವಹಿಸಿದ್ದೆ. ಹಲವೆಡೆ ಸುಮಾರಷ್ಟು ಪ್ರದರ್ಶನಗಳನ್ನು ನೀಡಿದೆವು. 'ಮಾವಿನ ಗುಡಿ..'ಯ ಪಾತ್ರ ಹೆಚ್ಚು ಸವಾಲಿನದಾಗಿತ್ತು. ನಿರ್ದೇಶಕರು 'ನಿನಗೆ ಸಾಧ್ಯ. ಮಾಡು' ಎಂದು ಆ ಪಾತ್ರವನ್ನು ವಹಿಸಿದರು. ಅದರಲ್ಲಿ 12 ವರ್ಷದ ಹುಡುಗಿಯಾಗಿ, ಮಧ್ಯವಯಸ್ಸು ಮತ್ತು ಇಳಿವಯಸ್ಸಿನ ಹೆಂಗಸಿನ ಪಾತ್ರವನ್ನು ನಿರ್ವಹಿಸಬೇಕಿತ್ತು. ರಂಗದ ಮೇಲೆ. ಅದು ನನಗೆ ಆತ್ಮವಿಶ್ವಾಸವನ್ನು ತುಂಬಿತು. ಸಿನಿಮಾ– ಕಿರುತೆರೆಯಲ್ಲಿ ನಟಿಸುವ ಅಪೇಕ್ಷೆಯಿಂದ ಆಡಿಷನ್ ಡಾಟ್ ಕಾಮ್ ನೋಡುತ್ತಿದ್ದೆ. ಮೊದಲ ಅವಕಾಶ 'ನಾಗಕನ್ನಿಕೆ'ಯಲ್ಲಿ ಸಿಕ್ಕಿತು. ಸಿನಿಮಾದಲ್ಲಿಯೂ ಅವಕಾಶ ಸಿಕ್ಕಿತ್ತು. ಅದಕ್ಕೆ ಪ್ರವಾಸ ಮಾಡಬೇಕಿತ್ತು. ಸದ್ಯದ ಸ್ಥಿತಿಯಲ್ಲಿ ದೀರ್ಘಕಾಲ ದೂರದೂರಿನಲ್ಲಿ ಇರಲು ಆಗುವುದಿಲ್ಲ ಎನ್ನುವ ಕಾರಣಕ್ಕೆ ನಿರಾಕರಿಸಿದೆ. ಮುಂದಿನ ದಿನಗಳು ನಟನೆಗೆ ಮುಡಿಪಾಗಿ ಇಡುತ್ತೇನೆ. ಆಗ ನೋಡೋಣ.

★ *ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ...*

ನಾನು ಮಗುವೊಂದರ ತಾಯಿಯ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಕಥೆ ಸಿಂಹಾವಲೋಕನ ಮಾದರಿಯಲ್ಲಿ ಸಾಗುತ್ತದೆ. ಅಂದರೆ, ನಾನೊಬ್ಬ ನಾಗಕನ್ನಿಕೆ. ನನ್ನಲ್ಲಿದ್ದ ನಾಗ ಮಣಿಯನ್ನು ಅಪಹರಣಕಾರರು ನನ್ನನ್ನು ಹತ್ಯೆ ಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ನನಗೆ ಚಿಕ್ಕ ಮಗಳಿದ್ದಾಳೆ. ಅವಳೇ 'ನಾಗಕನ್ನಿಕೆ'ಯ ಅದೇ ಪ್ರಧಾನ ಪಾತ್ರ. ಆಕೆಗೆ ತನ್ನ ಅಮ್ಮನಿಗೆ ಆದ ಅನ್ಯಾಯದ ಸೇಡನ್ನು ತೀರಿಸಿಕೊಳ್ಳುವ ಹಠವಿದೆ. ಇದು ಕಥೆಯ ಒಟ್ಟು ಹೂರಣ.

★ *ಚಿತ್ರೀಕರಣದ ಮೊದಲ ಅನುಭವ ಹೇಗಿತ್ತು?*

ಮೊದಲ ನಾಲ್ಕೈದು ದಿನಗಳ ಕಾಲ ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಯಲ್ಲಿ ಚಿತ್ರೀಕರಣ ಮಾಡಲಾಯಿತು. ಉಳಿದ ಕಥೆ ಬೆಂಗಳೂರಿನಲ್ಲಿಯೇ ನಡೆಯುತ್ತದೆ. ಪಾತ್ರಕ್ಕೆ ಒಪ್ಪಿದ ಶುರುವಿನಲ್ಲಿ ಸ್ಕ್ರಿಪ್ಟ್... ಕ್ಯಾಮೆರಾ... ಎಂದು ಸ್ವಯಂ ಭೀತಿಗೆ ಒಳಗಾಗಿದ್ದೆ. ಆದರೆ ಕ್ಯಾಮೆರಾ ಎದುರಿಸಿದಾಗ ಆತಂಕ ಪಡುವಂತದ್ದು ಏನೂ ಇಲ್ಲ ಎನಿಸಿತು. ನಾಟಕದಲ್ಲಿ ಪುಟಗಟ್ಟಲೇ ಸಂಭಾಷಣೆಯನ್ನು ಕಲಿತಿದ್ದ ನನಗೆ ಪುಟ್ಟ ಪುಟ್ಟ ವಾಕ್ಯಗಳು ಕಷ್ಟ ಅನ್ನಿಸಲಿಲ್ಲ. ಅಷ್ಟೇ ಏಕೆ? ನಿರ್ದೇಶಕ ರಾಮ್‌ಜಿ 'ಆಶ್ಚರ್ಯ ಎನ್ನುವಂತೆ ಅಭಿನಯಿಸಿದೆ' ಎಂದು ಪ್ರಶಂಸಿಸಿದರು. ರಿಟೇಕ್‌ಗಳಿಗೆ ಅವಕಾಶ ಇಲ್ಲದಂತೆ ನನ್ನ ಪಾತ್ರ ನಿರ್ವಹಿಸಿದ್ದಕ್ಕೆ ಅವರಿಗೂ ಖುಷಿ ಆಯಿತು. ಒಟ್ಟಾರೆ ಮನಸ್ಸಿದ್ದರೆ ಏನಾದರೂ ಸಾಧ್ಯ ಎನ್ನುವುದು ಮನದಟ್ಟು ಆಯಿತು. ಈಗ ನನ್ನ ಅಭಿನಯವನ್ನು ನಾನೇ ನೋಡಿ ಮೌಲ್ಯಮಾಪನ ಮಾಡಿಕೊಳ್ಳಬೇಕು ಎಂದು ಕೊಂಡಿದ್ದೇನೆ. ನೃತ್ಯವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದ್ದರಿಂದ ನನಗೆ ಕಷ್ಟ ಎನಿಸಲಿಲ್ಲ. ಒಟ್ಟಾರೆ ತುಂಬಾ ಚೆನ್ನಾಗಿತ್ತು.

★ *ಮುಂದಿನ ಹೆಜ್ಜೆಗಳನ್ನು ಹೇಗಿಡಬೇಕು ಎಂದುಕೊಂಡಿದ್ದೀರಿ?*

ಗೆಜ್ಜೆ ಕಟ್ಟುವುದು ಖಚಿತ. ಜೊತೆಗೆ ಸಿನಿಮಾ– ಧಾರಾವಾಹಿಗಳಲ್ಲಿ ಅಭಿನಯಿಸುತ್ತೇನೆ. ವಿವಿಧ ಗುಣ ಮತ್ತು ರೂಪವನ್ನು ಪ್ರದರ್ಶಿಸುವ ಪಾತ್ರಗಳಿಗೆ ಜೀವ ತುಂಬಬೇಕು ಎನ್ನುವುದು ನನ್ನ ಬಯಕೆ. ಇದಕ್ಕೆ ಹೊರತಾಗಿ ರಂಗಭೂಮಿಯನ್ನೂ ಬಿಡಲು ಆಗುವುದಿಲ್ಲ. ಅದು ನನ್ನ ಪ್ಯಾಶನ್ ಕೂಡ ಹೌದು. ರಂಗಭೂಮಿ, ಸಿನಿಮಾದಲ್ಲಿ ತಾಂತ್ರಿಕವಾಗಿ ದುಡಿಯಲು ಸಾಕಷ್ಟು ಅವಕಾಶಗಳು ಇವೆ. ಆದರೆ ಆ ಬಗ್ಗೆ ಹೆಚ್ಚಿನ ತಿಳಿವಳಿಕೆ ನನಗಿಲ್ಲ. ಹಾಗಾಗಿ ಅದನ್ನು ಯೋಚಿಸಿಲ್ಲ. ಕ್ರಮೇಣ ಆ ನಿಟ್ಟಿನಲ್ಲಿ ಕಲಿಯಲು ಸಾಧ್ಯವಾದರೆ ಅಲ್ಲಿಯೂ ಒಂದಿಷ್ಟು ಹೆಜ್ಜೆಗಳನ್ನು ಮೂಡಿಸಬಹುದು. ಏನೇ ಮಾಡಬೇಕು ಅಂದರೂ ಅದನ್ನು ಕಲಿಯಬೇಕು. ಕಲಿಯದೆ ಈಗಲೇ ನಿರ್ಧರಿಸುವುದು ನನಗೆ ಕಷ್ಟ.

■ ರಾಗು